# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 542 / 2017

ಸಿಡಬ್ಲ್ಯೂ- 6
ಪಿಡಬ್ಲ್ಯೂ- 3

ದಿನಾಂಕಃ **07.08.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ನೀಲಕಂಠಯ್ಯ |
| ಗಂಡನ ಹೆಸರುಃ | - | ಬಸ್ಸಯ್ಯ |
| ವಯಸ್ಸುಃ | -? | **47** ವರ್ಷ |
| ಉದ್ಯೋಗಃ | - | ನೌಕರಿ. |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಕಳೆದ 15 ವರ್ಷಗಳಿಂದ ವಾಟರಮೆನ್ ನಾಗಿ ಸಿ.ಎಂ.ಸಿಯಲ್ಲಿ ಕೆಲಸ ಮಾಡುತ್ತೇನೆ.

ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಜಪ್ತಿ ಪಂಚನಾಮೆಯಾಗಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನಾನು ಕರ್ತವ್ಯದ ಮೇಲೆ ಕೆಲಸ ಮಾಡುತ್ತಿದ್ದಾಗ, ಪಿ.ಡಬ್ಲ್ಯೂಡಿ ವಸತಿ ಗೃಹಗಳ ಹತ್ತಿರ ಇದ್ದಾಗ ಯಾದಗಿರಿ ನಗರ ಪೊಲೀಸ ಠಾಣೆಯವರು ನನ್ನನ್ನು ಕರೆದು ಸಹಿಗಳನ್ನು ಪಡೆದುಕೊಂಡಿದ್ದರು. ಯಾವಾ ವಿಚಾರಕ್ಕಾಗಿ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ.

ಸಾಕ್ಷಿಯು ಇನ್ನೊಂದು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಸಹ ಜಪ್ತಿ ಪಂಚನಾಮೆಯಾಗಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು. ಸದರಿ ಪೋಟೋಗಳು ದೃಡೀಕರಣ ಇರುತ್ತವೆ ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸ.ಸ.ಅ ರವರನು ಅವುಗಳನ್ನು

ಗುರುತಿಸಲು ಕೋರಿಕೊಂಡಿರುತ್ತಾರೆ. ಆದ್ದರಿಂದ ಅವುಗಳನ್ನು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ಜಪ್ತಿಪಡಿಸಿಕೊಂಡಿರುವುದಿಲ್ಲ, ಯಾವ ವಿಚಾರಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ 6 ಮತ್ತು 7 ರಲ್ಲಿ ನಿಂತಿರುತ್ತೇನೆ. ಅದೇ ರೀತಿ ಪೊಲೀಸರ ಕೋರಿಕೆಯ ಮೇರೆಗೆ ನಿಪಿ 4 ಮತ್ತು 5 ರ ಮೇಲೆ ಸಹಿಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ 26.07.2017 ರಂದು ಬೆಳಗ್ಗೆ 6-45 ಗಂಟೆಯಿಂದ 7-45 ಗಂಟೆಯ ವರೇಗೆ ಯಾದಗಿರಿ ನಗರ ಠಾಣೆಯ ಪೊಲೀಸರು ಠಾಣೆಯಲ್ಲಿ ಅಮಾನತು ಪಂಚನಾಮೆಗಾಗಿ ನನ್ನನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಠಾಣೆಯಲ್ಲಿ ಆರೋಪಿತಳು ಹಾಜರಿದ್ದಾಗ ಅವಳಿಂದ ಒಂದು ಕಬ್ಬಿಣದ ರಾಡು, ಒಂದು ಸ್ಕ್ರೂ ಡ್ರೈವರ್ ಹಾಗೂ ಒಂದು ಖಾಲಿ ಗೊಬ್ಬರ ಚೀಲ ಇವುಗಳನ್ನು ನನ್ನ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

ನಂತರ ಅದೇ ದಿನ ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ವರೇಗೆ ಕಲಬುರಗಿ ನಗರದ ಆರೋಪಿತಳ ಮನೆಯ ಪಕ್ಕದ ಗೋಡೆಯ ಹತ್ತಿರ ನೆಲದಲ್ಲಿ ಪಂಚನಾಮೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲಕ್ಕೆ 3 ತಲಾ ಒಂದು ತೊಲೆಯ ಬಂಗಾರ ಸುತ್ತುಂಗೂರಗಳು, ಒಂದು ಎರಡು ತೊಲೆಯ ಎರಡು ಎಳೆಯ ಸರ, ಒಂದು 4 ಗ್ರಾಂ, ಬಂಗಾರದ ಕರಿಮನೆಯಲ್ಲಿಯ ತಾಳಿ, ಒಂದು ಎರಡು ಗ್ರಾಂ. ಬಂಗಾರದ ರಿಂಗ್, 4 ಗ್ರಾಂ, ಬಂಗಾರದ ಎರಡು ಕಿವಿಯೋಳೆ, ಮೂರು ಎನ್.ಸಿ.ಸಿ.ಯ ಪದಕಗಳು ಹಾಗೂ ಒಂದು ನೀಲಿ ಪ್ಲಾಸ್ಟಿಕ್ ಕವರ್ ಇವುಗಳನ್ನು ನಮ್ಮ ಸಮಕ್ಷಮ ಪಂಚನಾಮೆಯನ್ನು ಮಾಡಿ ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗಳ ಕಾಲಕ್ಕೆ ನಿಪಿ 6 ಮತ್ತು 7 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ನಾನು ನಿಪಿ 4 ಮತ್ತು 5 ಗಳಿಗೆ ಸಹಕರಿಸಿ ನಿಪಿ 6 ಮತ್ತು 7 ಪೋಟೋಗಳನ್ನು ತೆಗೆಸಿದ್ದರು ಸಹ ಆರೋಪಿತಳಿಗೆ ಸಹಾಯ ಮಾಡಲು ಜಪ್ತಿಪಂಚನಾಮೆಗಳನ್ನು ಮಾಡಿ, ಮುದ್ದೆ ಮಾಲುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.